# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.70/2025

**ಫಿರ್ಯಾದಿಃ-** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿ ಎ2-** **ರಾಜಶೇಖರ ತಂದೆ ಗುರುಲಿಂಗಪ್ಪ ಗಾಡಿ,**
30 ವರ್ಷ, ಉಃ ಗಣಕಯಂತ್ರ ಅಪರೇಟರ,
ಮೊತೋಳಿ ಗ್ರಾಮ , ತಾಃ ಅಫಜಲಪೂರ,
ಜಿಃ ಕಲಬುರಗಿ.

## ದೋಷಾರೋಪಣೆ

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕಃ21.01.2013 ರಂದು ಅಫಜಲಪೂರ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹವಳಗಾ ಸಿಮಾಂತರದಲ್ಲಿ ಬರುವ ಶ್ರೀ ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಯಲ್ಲಿ ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, 1, 3 ರಿಂದ 5ನೇ ಆರೋಪಿತರಿಗೆ ತಮ್ಮ ಸ್ವಂತ ಲಾಭಕ್ಕೊಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಸಂಬಂಧ ಪಟ್ಟ ಶಾಲಾ ವಾಹನ ನಂ.ಕೆಎ-32-ಬಿ-2291 ನೇದ್ದರಲ್ಲಿ ಇಟ್ಟಿದ ಕಂಪನಿಯ 20 ಇಂಡೆಂಟಗಳ ಸ್ಲಿಪಗಳನ್ನು ಕಳುವು ಮಾಡಿಕೊಂಡು ಹೋಗಲು ಸಹಕರಿಸಿದ ಕಾರಣ, ಆ ಮೂಲಕ 2ನೇ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.379 ಸಹವಾಚಕ ಕಲಂ.34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ 5ನೇ

ಆರೋಪಿ ಗಜಾನನ ಮತ್ತು ಚಾಸಾ-4 ರಮೇಶ ಮಾಳಗಿ ರವರ ಖೋಟಿ ಸಹಿಗಳನ್ನು ಮಾಡಿಸಿಕೊಂಡು ಸ್ಲಿಪಗಳನ್ನು ಹಸ್ತಾಂತರಿಸಿ ಅದರ ಮೇಲಿಂದ ಮತ್ತೋಂದು ಕಂಪ್ಯೂಟರಿನಿಂದ ನಕಲಿ ಸ್ಲಿಪನ್ನು ತಯಾರಿಸಿ ದುರುಪಯೋಗಪಡಿಸಿಕೊಂಡು, ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸ ವಂಚನೆ ಮಾಡಿದ ಕಾರಣ, ಆ ಮೂಲಕ 2ನೇ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.406 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕದಂದು ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, 1, 3 ಮತ್ತು 5ನೇ ಆರೋಪಿತರಿಗೆ ಅನ್ಯಾಯದ ಲಾಭವನ್ನು ಪಡೆಯಲು ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ 5ನೇ ಆರೋಪಿ ಗಜಾನನ ಮತ್ತು ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿಗಳನ್ನು ಮಾಡಿಸಿಕೊಂಡು ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ 24.01.2013 ರಿಂದ 21.02.2013 ರ ಅವಧಿಯಲ್ಲಿ ಸದರಿ ಇಂಡೆಂಟ ಸ್ಲಿಪಗಳನ್ನು ಕೊಟ್ಟು ಒಟ್ಟು 2265 ಲೀಟರ ಡಿಜಲನ್ನು ತೆಗೆದುಕೊಂಡು ಬಂದು ಮಾರಾಟ ಮಾಡಿ ಸ್ವಂತಕ್ಕೆ ಉಪಯೋಗಿಸಿಕೊಂಡು ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸ, ವಂಚನೆ ಮಾಡಿ ನಷ್ಟವುಂಟು ಮಾಡಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.417 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕದಂದು ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ 5ನೇ ಆರೋಪಿ ಗಜಾನನ ಮತ್ತು ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿ ಮಾಡಿಸಿಕೊಂಡು, ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ

24.01.2013 ರಿಂದ 21.02.2013 ರ ಅವಧಿಯಲ್ಲಿ ಸದರ ಇಂಡೆಂಟ ಸ್ಲಿಪಗಳನ್ನು ಕೊಟ್ಟು ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸ ಮತ್ತು ವಂಚನೆ ಮಾಡಿದ್ದು, ಆ ಮೂಲಕ 2ನೇ ಆರೋಪಿನಾದ ನೀವು ಭಾ.ದಂ.ಸಂ.ಕಲಂ.465 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಲಾದ ದಿನಾಂಕದಂದು ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ನಿಮ್ಮ ಸ್ವಂತ ಲಾಭಕ್ಕೋಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಮೋಸ ಮಾಡುವ ಉದ್ದೇಶದಿಂದ ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರ ಅಪರೇಟರಿಗೆ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಲು ಸಹಕರಿಸಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.468 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ 5ನೇ ಆರೋಪಿ ಗಜಾನನ ಮತ್ತು ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿಗಳನ್ನು ಮಾಡಿಸಿದ್ದು, ಆ ಮೂಲಕ 2ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.471 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

7. ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ 5ನೇ ಆರೋಪಿ ಗಜಾನನ ಮತ್ತು ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿಗಳನ್ನು ಮಾಡಿಸಿಕೊಂಡು ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ

ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ 24.01.2013 ರಿಂದ 21.02.2013 ರ ಅವಧಿಯಲ್ಲಿ ಸದರ ಇಂಡೆಂಟ ಸ್ಲಿಪಗಳನ್ನು ಕೊಟ್ಟು ಒಟ್ಟು 2265 ಲೀಟರ ಡಿಜಲನ್ನು ತೆಗೆದುಕೊಂಡು ಬಂದು ಬೇರೆಕಡೆ ಯಲ್ಲಿಯೋ ಮಾರಾಟ ಮಾಡಿ ಒಟ್ಟು ರೂ.1,19,051/- ರೂಪಾಯಿಗಳ ಹಣ ದುರುಪಯೋಗಪಡಿಸಿಕೊಂಡು, ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸವನ್ನುಂಟು ಮಾಡಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.420 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

8. ಮೇಲೆ ಹೇಳಲಾದ ದಿನಾಂಕದಂದು 2ನೇ ಆರೋಪಿಯಾದ ನೀವು 1ನೇ ಆರೋಪಿ ಶರಣಬಸಪ್ಪ ಗಾಡಿ ಇವರು ಕಂಪನಿಗೆ ಸಂಬಂಧ ಪಟ್ಟ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಅಪರೇಟರಾಗಿ ಕೆಲಸ ಮಾಡುತ್ತಿದ್ದಾಗ, ಇವರ ಸಹಪಾಟಿಯಾಗಿದ್ದು, ನಿಮ್ಮ ಸ್ವಂತ ಲಾಭಕ್ಕೋಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಮೋಸ ಮಾಡುವ ಉದ್ದೇಶದಿಂದ ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯಾರಿಸಲು 1ನೇ ಆರೋಪಿಗೆ ಪ್ರಚೋದನೆ ನೀಡಿದ ಕಾರಣ, ಆ ಮೂಲಕ 2ನೇ ಆರೋಪಿತನಾದ ನೀವು ಭಾ.ದಂ.ಸಂ.ಕಲಂ.109 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

## 2ನೇ ಆರೋಪಿತನ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-2

(ದೋಷಾರೋಪಣೆಯನ್ನು 2ನೇ ಆರೋಪಿತನಿಗೆ ಓದಿ ಹೇಳಿದ್ದು, ಆತನು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 30.10.2025 ಪ್ರ.ದ.ನ್ಯಾ.ದಂ. ಅಫಜಲಪೂರ.